## ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಸಿದ್ದಾಪುರ

ಸಿ.ಸಿ.107 /2024

| | |
|---|---|
| ಸಿ.ಡಬ್ಲ್ಯೂ: | 2 |
| ಪಿ.ಡಬ್ಲ್ಯೂ: | 2 |

| | | |
|---|---|---|
| **ಸಾಕ್ಷಿದಾರರ ಹೆಸರು** | : | ಗಿರೀಶ ಕೃಷ್ಣಾ ನಾಯರ್ |
| ತಂದೆ ಹೆಸರು | : | ಕೃಷ್ಣಾ ನಾಯರ್ |
| ವಯಸ್ಸು | : | 34 ವರ್ಷ |
| ವೃತ್ತಿ | : | ಚಾಲಕರು ಮತ್ತು ಕೂಲಿ ಕೆಲಸ |
| ವಾಸ | : | ಮಂಡ್ಲಿಕೊಪ್ಪ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 06-06-2026**

**ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ**

ನನಗೆ ಚಾಸಾ-3 ರವರ ಪರಿಚಯ ಇರುತ್ತದೆ. ಚಾಸಾ-1 ನನ್ನ ಅತ್ತೆಯ ಮಗ ಇರುತ್ತಾನೆ. ನಾನು ಬಸ್ ನಿಲ್ದಾಣದಲ್ಲಿ ಇದ್ದಾಗ ಪೋಲೀಸರು ನನ್ನ ಬಳಿ ಬಂದು ಸಹಿ ಹಾಕು ಎಂದು ಹೇಳಿದ್ದರಿಂದ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ . ಈ ಪ್ರಕರಣದ ಬಗ್ಗೆ ನನಗೆ ಉಳಿದ ಮಾಹಿತಿ ಇರುವುದಿಲ್ಲ.

ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಲೇ ನಿಪಿ-1 ಎಂದು ಗುರುತಿಸಿದ್ದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಕಚ್ಚಾ ನಕಾಶೆಯನ್ನು ತೋರಿಸಿದ್ದು ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ಅವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡುವಂತೆ ಕೋರಿಕೊಂಡಿದ್ದು, ಆಲಿಸಿ ಅನುಮತಿ ನೀಡಲಾಯಿತು)

**ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ**

ದಿಃ 01-03-2024 ರಂದು ಪೋಲೀಸರು ನನ್ನನ್ನು ಹಾಗೂ ಚಾಸಾ-3 ರವರನ್ನು ಹಲ್ಲೆಯ ಸಂಬಂಧ ಪಂಚನಾಮೆ ಮಾಡುವ ಸಲುವಾಗಿ ಕರೆದಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ನಾನು ಮತ್ತು ಚಾಸಾ-3 ರವರು ಒಪ್ಪಿಕೊಂಡೆವು ಎಂದರೆ ಸರಿಯಲ್ಲ. ನಂತರ ನಾನು ಮತ್ತು ಚಾಸಾ-3 ರವರು ಘಟನಾ ಸ್ಥಳಕ್ಕೆ ಹೋಗಿದ್ದು, ಅಲ್ಲಿ ಪೋಲೀಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾವು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪೋಲೀಸರು ಘಟನಾ ಸ್ಥಳದಲ್ಲಿ ಒಂದು ಕಾಡು ಜಾತಿಯ ಮರದ ಬಡಿಗೆಯನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೋಲೀಸರು ಘಟನಾ ಸ್ಥಳದ ಪೊಟೊ ತೆಗೆದಿರುತ್ತಾರೆ ಎಂದರೆ ಯಾವ ಕಾರಣಕ್ಕಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಗೆ ಪೋಲೀಸರು ನನಗೆ ನೋಟೀಸ್ ನೀಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಆರೋಪಿತರು ನನ್ನ ಸಂಬಂದಿಕರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸಾಕ್ಷಿಗೆ ಈಗ ನೋಟೀಸ್ ನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-7 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-7(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲಎಂದು ತಿಳಿಸಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

( ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಸ.ಒ

ಸಹಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ

ಸಿದ್ದಾಪುರ